# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 624 (63) |
| ಸದಸ್ಯರ ಹೆಸರು | : | ಶ್ರೀ ಕೆ ವಿವೇಕಾನಂದ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 09-03-2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರ ಹುದ್ದೆಯನ್ನು ಯಾವ ಮಾನದಂಡದ ಆಧಾರದ ಮೇಲೆ ಹೆಚ್ಚುವರಿ ಎಂದು ಪರಿಗಣಿಸಲಾಗಿದೆ; | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು 2020 ರ ಕಾಯ್ದೆ 4 (1) ಮತ್ತು (2) ರನ್ವಯ ಪ್ರತಿ ಪರ್ಯಾಯ ವರ್ಷವೂ ಮಂಜೂರಾದ ಹುದ್ದೆಗಳು ಮತ್ತು ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರನ್ನು ಸರ್ಕಾರವು ಕಾಲ-ಕಾಲಕ್ಕೆ ನಿಗದಿಪಡಿಸಿದ ವಿದ್ಯಾರ್ಥಿ-ಉಪನ್ಯಾಸಕ ಅನುಪಾತದ ಆಧಾರದ ಮೇಲೆ ಸಮರ್ಪಕವಾಗಿ ಮರುಹಂಚಿಕೆ ಮಾಡತಕ್ಕದ್ದು. ವರ್ಗಾವಣೆ ಕಾಯ್ದೆಯನ್ನು ಅನ್ವಯಿಸಿಕೊಂಡು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಪ್ರಾಂಶುಪಾಲರ ಮತ್ತು ಉಪನ್ಯಾಸಕರ ವರ್ಗಾವಣೆ ನಿಯಂತ್ರಣ) ನಿಯಮಗಳು, 2022 ದಿನಾಂಕ: 12-05-2022 ರಲ್ಲಿನ ನಿಯಮ (8) (9) ಮತ್ತು (10) ರನ್ವಯ ವಿದ್ಯಾರ್ಥಿ-ಉಪನ್ಯಾಸಕ ಅನುಪಾತದ (320:1) ಆಧಾರದ ಮೇಲೆ ಹೆಚ್ಚುವರಿ ಉಪನ್ಯಾಸಕರನ್ನು ಗುರುತಿಸಿ ಪಟ್ಟಿಯನ್ನು ಪ್ರಕಟಿಸಲಾಗಿದೆ.<br><br>ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಪ್ರಾಂಶುಪಾಲರ ಮತ್ತು ಉಪನ್ಯಾಸಕರ ವರ್ಗಾವಣೆ ನಿಯಂತ್ರಣ) ನಿಯಮಗಳು, 2022 ನೇ ಸಾಲಿನಿಂದ ಜಾರಿಗೆ ಬಂದಿದ್ದು, ಜಾರಿಗೆ ಬಂದ ವರ್ಷವನ್ನು ಹೊರತುಪಡಿಸಿ ನಂತರ ಪರ್ಯಾಯ ವರ್ಷವಾದ 2024 ನೇ ಸಾಲಿನಲ್ಲಿ ಹೆಚ್ಚುವರಿ ಉಪನ್ಯಾಸಕರನ್ನು ಗುರುತಿಸಿ ವರ್ಗಾವಣೆಯನ್ನು ಮಾಡಲಾಗಿರುತ್ತದೆ. ಈ ವರ್ಷ 2026 ನೇ ವರ್ಷವು ಪರ್ಯಾಯ ವರ್ಷವಾಗಿರುತ್ತದೆ. |
| ಆ) | ಮಾನದಂಡದಲ್ಲಿ ವಿದ್ಯಾರ್ಥಿಗಳ-ಉಪನ್ಯಾಸಕರ ಅನುಪಾತದ ಪ್ರಮಾಣವನ್ನು ಪರಿಗಣಿಸುವುದಾದರೆ ಈ ಹಿಂದಿನ ಅನುಪಾತವನ್ನು ಪರಿಗಣಿಸಲಾಗುತ್ತಿದೆಯೇ; ಇಲ್ಲವೆ ಅನುಪಾತವನ್ನು ಬದಲಾವಣೆ ಮಾಡುವ ಆಲೋಚನೆ ಸರ್ಕಾರದ ಮುಂದಿದೆಯೇ; | ಅನುಪಾತ ಪ್ರಮಾಣವನ್ನು ಬದಲಾವಣೆ ಮಾಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಆದ್ದರಿಂದ ಸದರಿ ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ) | ಅನುಪಾತ ಪ್ರಮಾಣವನ್ನು ಪ್ರಾಥಮಿಕ - ಪ್ರೌಢಶಿಕ್ಷಣ ಇಲಾಖೆಯಲ್ಲಿ ಕಡಿಮೆ ಮಾಡಿದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಕಡಿಮೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ? | |

ಸಂಖ್ಯೆ: ಇಪಿ 70 ಡಿಜಿಡಬ್ಲ್ಯೂ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು